**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560 001.**

ಸಂಖ್ಯೆ: ಸಿ4[10]/ಇತರೆ/01/2017-18 ದಿನಾಂಕ: 31-07-2018

-:ಜ್ಞಾಪನ:-

ವಿಷಯು: 2018-19ನೇ ಸಾಲಿನಲ್ಲಿ ವಿದ್ಯಾರ್ಥಿಗಳಿಗೆ ಬಸ್‌ಪಾಸ್‌ಗಳನ್ನು ಶಾಲೆಯ ಮುಖಾಂತರ ವಿತರಿಸುವ ಬಗ್ಗೆ.

ಉಲ್ಲೇಖ: ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು ಇವರ ಪತ್ರ ಸಂಖ್ಯೆ: ಬೆಂ.ಮ.ಸಾ.ಸಂಸ್ಥೆ: ಕೇಕ:ಮುಸಂವ್ಯ:ಆ:ಸಾ679: 2018-19. ದಿ: 14-06-2018.

*******

ವಿಷಯಕ್ಕೆ ಸಂಬಂಧಿಸಿದಂತೆ, ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 2018-19ನೇ ಸಾಲಿನಲ್ಲಿ ರಿಯಾಯಿತಿ ಪಾಸುಗಳನ್ನು ಪಡೆಯಲು ಶಿಕ್ಷಣ ಇಲಾಖೆಯ SATS (Student Achivement tracking System)/ ಅಪ್ಲಿಕೇಷನ್‌ನಲ್ಲಿ ಅರ್ಜಿ ಸಲ್ಲಿಸುವ ವಿಧಾನ ಮಾಹಿತಿಯನ್ನು ಶಿಕ್ಷಣ ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಹಾಗೂ ಶಾಲೆಯ ಮುಖಾಂತರ ಪಾಸುಗಳ ವಿತರಿಸುವ ಬಗ್ಗೆ ಶಾಲಾ ನೋಡಲ್ ಅಧಿಕಾರಿಗಳಿಗೆ ಒಂದು ದಿನದ ಕಾರ್ಯಗಾರ ತರಬೇತಿಯನ್ನು ಆಯೋಜಿಸಲು ಕೋರಿರುತ್ತಾರೆ.

ಆದ್ದರಿಂದ ತಮ್ಮ ಜಿಲ್ಲಾ ವ್ಯಾಪ್ತಿಯ ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಿಯಾಯಿತಿ ಪಾಸ್ ಶಾಲೆಗಳ ಮುಖಾಂತರ ವಿತರಿಸಲು ಶಾಲಾ ನೋಡೆಲ್ ಅಧಿಕಾರಿಗಳಿಗೆ ಒಂದು ದಿನದ ತರಬೇತಿಯನ್ನು ಆಯೋಜಿಸಲು ವ್ಯವಸ್ಥಾಪಕರ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯವರನ್ನು ಸಂಪರ್ಕಿಸಿ, ದಿನಾಂಕವನ್ನು ನಿಗಧಿಪಡಿಸಿ ತರಬೇತಿ ಕಾರ್ಯಗಾರವನ್ನು ಆಯೋಜಿಸಲು ಕಟ್ಟುನಿಟ್ಟಿನ ಕ್ರಮವಹಿಸುವಂತೆ ಈ ಮೂಲಕ ತಿಳಿಸಿದೆ.

ನಿರ್ದೇಶಕರು (ಪ್ರೌಢಶಿಕ್ಷಣ)

ಗೆ,

1. ಉಪನಿರ್ದೇಶಕರು (ಆಡಳಿತ) ಬೆಂಗಳೂರು ಉತ್ತರ/ದಕ್ಷಿಣ/ಗ್ರಾಮಾಂತರ/ರಾಮನಗರ ಜಿಲ್ಲೆ, ಸಾರ್ವಜನಿಕ ಶಿಕ್ಷಣ ಇಲಾಖೆ, ರವರಿಗೆ ಅಗತ್ಯ ಕ್ರಮಕ್ಕಾಗಿ
2. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ (ಜಿಲ್ಲಾ ಉಪನಿರ್ದೇಶಕರ ಮೂಲಕ)
3. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ವ್ಯಾಪ್ತಿಗೆ ಒಳಪಡುವ ಎಲ್ಲಾ ಶಾಲೆಯ ಮುಖ್ಯಶಿಕ್ಷಕರುಗಳಿಗೆ ಅಗತ್ಯ ಕ್ರಮಕ್ಕಾಗಿ (ಜಿಲ್ಲಾ ಉಪನಿರ್ದೇಶಕರ/ಕ್ಷೇತ್ರಶಿಕ್ಷಣಾಧಿಕಾರಿಗಳ ಮೂಲಕ)

**ಪ್ರತಿಯನ್ನು ಮಾಹಿತಿಗಾಗಿ:-**

1. ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು ರವರಿಗೆ
2. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು-27 ರವರಿಗೆ
3. ಹಿರಿಯ ಸಹಾಯಕ ನಿರ್ದೇಶಕರು ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು-560001
4. ಕಛೇರಿಯ ಪ್ರತಿ.

D:\C4(10)\ Other Letters

# <u>ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿ ರಿಯಾಯಿತಿ ಪಾಸುಗಳ ವಿತರಣಾ ಕ್ರಮ</u>

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ವಿದ್ಯಾರ್ಥಿಗಳ ಹಿತವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರದ ನಿರ್ದೇಶನದಂತೆ ಸಂಸ್ಥೆಯು ರಚನೆಯಾದಗಿನಿಂದಲೂ ವಿದ್ಯಾರ್ಥಿಗಳಿಗೆ ರಿಯಾಯಿತಿ ದರದ ಪಾಸುಗಳನ್ನು ವಿತರಣೆ ಮಾಡಿಕೊಂಡು ಬರುತ್ತಿದೆ. ಸದರಿ ಪಾಸುಗಳನ್ನು ಪೂರ್ವ ಮುದ್ರಿತ ಕಾರ್ಡ್‌ಗಳ ಮೂಲಕ ವಿತರಣೆ ಮಾಡಲಾಗುತ್ತಿತ್ತು. ಆದರೆ 2018–19 ನೇ ಶೈಕ್ಷಣಿಕ ಸಾಲಿನಿಂದ ವಿದ್ಯಾರ್ಥಿ ರಿಯಾಯಿತಿ ಪಾಸುಗಳನ್ನು ಸ್ಮಾರ್ಟ್‌ಕಾರ್ಡ್ ಮಾದರಿಯಲ್ಲಿ ಶಾಲಾ/ಕಾಲೇಜಿನ ಮುಖಾಂತರ ವಿತರಣೆ ಮಾಡಲು ಉದ್ದೇಶಿಸಿರುತ್ತದೆ.

**ಈ ರೀತಿ ಸ್ಮಾರ್ಟ್‌ಕಾರ್ಡ್ ಮಾದರಿಯ ಪಾಸುಗಳನ್ನು ಶಾಲಾ/ಕಾಲೇಜಿನ ಮೂಲಕ ವಿತರಿಸುವುದರಿಂದ ವಿದ್ಯಾರ್ಥಿ/ಪೋಷಕರಿಗೆ ಆಗುವ ಅನುಕೂಲಗಳು**

| ಕ್ರಮ ಸಂಖ್ಯೆ | ಪೂರ್ವ ಮುದ್ರಿತ ಪಾಸುಗಳನ್ನು ಪಡೆಯುವಾಗ ಅನುಸರಿಸಬೇಕಾದ ಕ್ರಮಗಳು | ಸ್ಮಾರ್ಟ್‌ಕಾರ್ಡ್ ಮಾದರಿಯ ಪಾಸುಗಳನ್ನು ಶಾಲಾ/ಕಾಲೇಜಿನ ಮೂಲಕ ಪಡೆಯಲು ಅನುಸರಿಸಬೇಕಾದ ಕ್ರಮಗಳು |
|---|---|---|
| 1. | ವಿದ್ಯಾರ್ಥಿಯು ಮುಂದಿನ ಶೈಕ್ಷಣಿಕ ವರ್ಷಕ್ಕೆ ದಾಖಲಾಗುವುದು ಅಥವಾ ಅದೇ ಶಾಲೆಯಲ್ಲಿ ದಾಖಲಾತಿ ಮುಂದುವರೆಸುವುದು. | ಶಾಲೆಯಲ್ಲಿ ದಾಖಲಾದ ನಂತರ ಪಾಸನ್ನು ಪಡೆಯುವ ಬಗ್ಗೆ ಶಾಲೆಯಲ್ಲಿ ತಿಳಿಸುವುದು. |
| 2. | ಬೆಂ.ಮ.ಸಾ.ಸಂಸ್ಥೆಯ ಬಸ್ ನಿಲ್ದಾಣದಲ್ಲಿ ವಿದ್ಯಾರ್ಥಿ ಪಾಸಿನ ಅರ್ಜಿಯನ್ನು ಪಡೆಯುವುದು. | |
| 3. | ಅರ್ಜಿಯನ್ನು ಭರ್ತಿ ಮಾಡಿ, ಶಾಲೆಯಲ್ಲಿ ದೃಢೀಕರಿಸಿದ ಅರ್ಜಿಯೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸುವುದು.<br>➢ ಶಾಲಾ/ಕಾಲೇಜಿನ ಫೀ ರಸೀದಿ,<br>➢ ಆಧಾರ್ ಕಾರ್ಡ್/ವಾಸಸ್ಥಳ ದೃಢೀಕರಣ,<br>➢ ಕಾಲೇಜಿನ ಗುರುತಿನ ಚೀಟಿ<br>➢ ನಿಗಧಿತ ಶುಲ್ಕ,<br>➢ ಪ.ಜಾತಿ/ಪ.ಪಂಗಡ ವಿದ್ಯಾರ್ಥಿಗಳು ಜಾತಿ ಪ್ರಮಾಣ ಪತ್ರ, | ಶಾಲೆಯ ನೋಡಲ್ ಅಧಿಕಾರಿಯು ಶಿಕ್ಷಣ ಇಲಾಖೆಯ SATS(Student Achivement Tracking System) ಅಪ್ಲಿಕೇಷನ್‌ನಲ್ಲಿ ವಿದ್ಯಾರ್ಥಿ ಪಾಸಿಗಾಗಿ ಅರ್ಜಿ ಸಲ್ಲಿಸುವುದು ಹಾಗೂ ಸೇವಾ ಶುಲ್ಕವನ್ನು ಸಂಗ್ರಹಿಸುವುದು. |
| 4. | ಪೂರ್ವ ಮುದ್ರಿತ ಪಾಸುಗಳನ್ನು ಪಡೆಯುವಾಗ ವಿದ್ಯಾರ್ಥಿಗಳು/ಪೋಷಕರು ಬಸ್ ನಿಲ್ದಾಣಗಳಲ್ಲಿ ಹೆಚ್ಚು ಹೊತ್ತು ಸರದಿ ಸಾಲಿನಲ್ಲಿ ನಿಂತು ಅರ್ಜಿಯನ್ನು ಸಲ್ಲಿಸಿ ಪಾಸನ್ನು ಪಡೆಯಬೇಕಾಗಿತ್ತು. | |

**ಪ್ರಾಥಮಿಕ ಮತ್ತು ಪ್ರೌಢಶಾಲಾ ವಿದ್ಯಾರ್ಥಿ ಪಾಸುಗಳ ಅರ್ಜಿ ಸಲ್ಲಿಸುವ ಮತ್ತು ಪಾಸು ವಿತರಣೆಯ ವಿವರ.**

1. **ವಿದ್ಯಾರ್ಥಿಗಳ ಪಾತ್ರ :-**

- 1 ರಿಂದ 7 ನೇ ತರಗತಿಯವರೆಗೆ: ವಿದ್ಯಾರ್ಥಿಗಳು ಪಾಸುಗಳನ್ನು ಪಡೆಯಲು ಇಚ್ಛಿಸಿದ್ದಲ್ಲಿ ಶಾಲೆಯಲ್ಲಿ ತಿಳಿಸುವುದು ಹಾಗೂ ಪಾಸಿನ ಮೊತ್ತವಾದ ರೂ.150/– ನ್ನು ಶಾಲೆಯಲ್ಲಿ ಪಾವತಿಸುವುದು.
- 8ನೇ ತರಗತಿಯಿಂದ ರಿಂದ 10ನೇ ತರಗತಿಯವರೆಗೆ : ವಿದ್ಯಾರ್ಥಿಗಳು ಪಾಸುಗಳನ್ನು ಪಡೆಯಲು ಇಚ್ಛಿಸಿದ್ದಲ್ಲಿ ಶಾಲೆಯಲ್ಲಿ ತಿಳಿಸುವುದು ಹಾಗೂ ನಿಗಧಿತ ಪಾಸಿನ ಮೊತ್ತವನ್ನು ಅಂಚೆ ವ್ಯಕ್ತಿಯ ಬಳಿ ಪಾವತಿಸುವುದು.
- ಪಿ.ಯು.ಸಿ : ವಿದ್ಯಾರ್ಥಿಗಳು ಪಾಸುಗಳನ್ನು ಪಡೆಯಲು ಇಚ್ಛಿಸಿದ್ದಲ್ಲಿ ಕಾಲೇಜಿನಲ್ಲಿ ತಿಳಿಸುವುದು ಹಾಗೂ ಪಾಸಿನ ಮೊತ್ತವನ್ನು ಕಾಲೇಜಿನಲ್ಲಿ ಪಾವತಿಸುವುದು.

2. **ಶಾಲೆಯ/ಕಾಲೇಜಿನ ನೋಡಲ್ ಅಧಿಕಾರಿಯ ಪಾತ್ರ :**

   - ಪಾಸನ್ನು ಪಡೆಯಲು ಇಚ್ಛೆ ನೀಡಿದ ವಿದ್ಯಾರ್ಥಿಗಳ ಅರ್ಜಿಯನ್ನು ಶಿಕ್ಷಣ ಇಲಾಖೆಯ SATS(Student Achivement Tracking System)/ PU online Portal ಅಪ್ಲಿಕೇಷನ್‌ನಲ್ಲಿ ಸಲ್ಲಿಸುವುದು.
   - SATS(Student Achivement Tracking System)/ PU online Portal ಅಪ್ಲಿಕೇಷನ್‌ನಲ್ಲಿ ಬೆಂ.ಮ.ಸಾ.ಸಂಸ್ಥೆ ವಿದ್ಯಾರ್ಥಿ ಬಸ್‌ಪಾಸು: ಎಂಬ ಕಲಂ ಇರುತ್ತದೆ
     - ಈ ಕಲಂನ್ನು ಕ್ಲಿಕ್ ಮಾಡಿದ ಕೂಡಲೇ ಶಾಲೆಯ ಎಲ್ಲಾ ವಿದ್ಯಾರ್ಥಿಗಳ ಹೆಸರು ಮೂಡುತ್ತದೆ.
     - Search ಆಯ್ಕೆಯಲ್ಲಿ ವಿದ್ಯಾರ್ಥಿಯ ಗುರುತಿನ ಸಂಖ್ಯೆಯನ್ನು ನಮೂದಿಸಿದ ಕೂಡಲೇ ವಿದ್ಯಾರ್ಥಿಯ ಹೆಸರು ಆಯ್ಕೆಯಾಗುತ್ತದೆ.
     - ಸದರಿ ಹೆಸರನ್ನು ಕ್ಲಿಕ್ ಮಾಡಿದ ಕೂಡಲೇ ವಿದ್ಯಾರ್ಥಿ ಪಾಸಿನ ಅರ್ಜಿಯಲ್ಲಿ ಸದರಿ ವಿದ್ಯಾರ್ಥಿಯ ವಿವರಗಳು ಮೂಡುತ್ತವೆ.
     - ಈ ಅರ್ಜಿಯಲ್ಲಿ ವಿದ್ಯಾರ್ಥಿಯು ಪ್ರಯಾಣಿಸುವ ಮಾರ್ಗದ ವಿವರಗಳನ್ನು ನಮೂದಿಸುವುದು ಹಾಗೂ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳ ಭಾವಚಿತ್ರ ಪಡೆದು ಸ್ಕ್ಯಾನ್ ಮಾಡಿ ಅಪ್‌ಲೋಡ್ ಮಾಡುವುದು.
     - ನಂತರ ಅರ್ಜಿಯನ್ನು ಸಲ್ಲಿಸುವುದು( click Submit).
     - Submit ಮಾಡಿದ ನಂತರ ಅರ್ಜಿಯ ಸ್ವೀಕೃತಿ ಸಂಖ್ಯೆಯು ಮೂಡುವುದು.
     - ಸ್ವೀಕೃತಿ ಸಂಖ್ಯೆಯ ಮೂಲಕ ಪಾಸು ಮುದ್ರಣ & ರವಾನೆಯ ಪೂರ್ಣ ಮಾಹಿತಿಯನ್ನು ತಿಳಿಯಬಹುದಾಗಿದೆ.
   - 1 ರಿಂದ 7 ನೇ ತರಗತಿ ಹಾಗೂ ಪಿ.ಯು.ಸಿ ವಿದ್ಯಾರ್ಥಿಗಳಿಂದ ನಿಗಧಿತ ಪಾಸಿನ ಮೊತ್ತವನ್ನು ಪಡೆದು, ಬೆಂ.ಮ.ಸಾ.ಸಂಸ್ಥೆಗೆ ಪಾವತಿಸುವುದು.

3. <u>ಬೆಂ.ಮ.ಸಾ.ಸಂಸ್ಥೆಯ ಪಾತ್ರ :-</u>

- SATS(Student Achivement Tracking System)/ PU online Portal ಅಪ್ಲಿಕೇಷನ್‌ನಲ್ಲಿ ಅರ್ಜಿಯನ್ನು ಸ್ವೀಕರಿಸಿದ ನಂತರ ಸಂಸ್ಥೆಯು ಸ್ಮಾರ್ಟ್‌ಕಾರ್ಡ್ ಮಾದರಿಯ ಪಾಸನ್ನು ಮುದ್ರಣಗೊಳಿಸುತ್ತದೆ.
- 1ನೇ ತರಗತಿಯಿಂದ 7 ನೇ ತರಗತಿ ಹಾಗೂ ಪಿ.ಯು.ಸಿ ವಿದ್ಯಾರ್ಥಿಗಳ ಸ್ಮಾರ್ಟ್‌ಕಾರ್ಡ್ ಮಾದರಿಯ ಪಾಸುಗಳನ್ನು ಸಂಸ್ಥೆಯ ಸಿಬ್ಬಂದಿಗಳ ಮೂಲಕ ಶಾಲೆಗೆ ರವಾನಿಸಲಾಗುವುದು.
- ಪ್ರೌಢಶಾಲೆ ವಿದ್ಯಾರ್ಥಿಗಳ ಪಾಸುಗಳನ್ನು ಅಂಚೆ ಮೂಲಕ ವಾಸಸ್ಥಳ ವಿಳಾಸಕ್ಕೆ ವಿತರಿಸಲಾಗುವುದು.

**8ನೇ ತರಗತಿಯಿಂದ ಪಿ.ಯು.ಸಿ ವರೆಗಿನ ವಿದ್ಯಾರ್ಥಿ ಪಾಸಿನ ಮೊತ್ತದ ವಿವರ:**

| ತರಗತಿ | ಪಾಸಿನ ಮೊತ್ತ | ಸಂಸ್ಕರಣಾ ಶುಲ್ಕ + ವಿಮಾ ಶುಲ್ಕ+ಅಂಚೆ ಶುಲ್ಕ | ಒಟ್ಟು |
|---|---|---|---|
| ಪ್ರೌಢಶಾಲೆ (ಬಾಲಕಿಯರು) | ರೂ.400/- | ರೂ.200/- | ರೂ.600/- |
| ಪ್ರೌಢಶಾಲೆ (ಪ.ಜಾತಿ / ಪ.ಪಂ ಬಾಲಕಿಯರಿಗೆ) | ಉಚಿತ | ರೂ.200/- | ರೂ.200/- |
| ಪ್ರೌಢಶಾಲೆ (ಬಾಲಕರು) | ರೂ.600/- | ರೂ.200/- | ರೂ.800/- |
| ಪ್ರೌಢಶಾಲೆ (ಪ.ಜಾತಿ/ ಪ.ಪಂಗಡ ಬಾಲಕರು) | ಉಚಿತ | ರೂ.200/- | ರೂ.200/- |
| ಪಿಯುಸಿ ವಿದ್ಯಾರ್ಥಿಗಳು | ರೂ.900/- | ರೂ.200/- | ರೂ.1100/- |
| ಪಿಯುಸಿ ವಿದ್ಯಾರ್ಥಿಗಳು (ಪ.ಜಾತಿ / ಪ.ಪಂ ) | ಉಚಿತ | ರೂ.200/- | ರೂ.200/- |

ವ್ಯವಸ್ಥಾಪಕ ನಿರ್ದೇಶಕರು
ಬೆಂ.ಮ.ಸಾ.ಸಂಸ್ಥೆ.